2. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚಿಂತಾಮಣಿ ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಚೇಳೂರು ಹೋಬಳಿಯ ಅಂಗನವಾಡಿ ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳನ್ನು ಭರ್ತಿ ಮಾಡುವುದು.

47(160) - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಚೇಳೂರು ಹೋಬಳಿಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಇವೆ? ಎಷ್ಟು ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಕೆಲಸ ಮಾಡುತ್ತಿದ್ದಾರೆ? ಎಷ್ಟು ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಖಾಲಿ ಇರುತ್ತವೆ.

ಆ) 1999-2000, 2001-02 ರ ವರ್ಷಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಹುದ್ದೆ ಬಿಟ್ಟು ಹೋದಾಗ ಆ ಕೇಂದ್ರಗಳಿಗೆ ಕಾರ್ಯಕರ್ತೆಯರನ್ನು ತುಂಬಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಖಾಲಿ ಇರುವ ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಕ ಮಾಡಲು ನೇಮಕಾತಿ ಸಮಿತಿ ಇದೆಯೆ? ಇದ್ದರೆ ಸದಸ್ಯರುಗಳು ಯಾರು ಎಂಬುದನ್ನು ತಿಳಿಸುವಿರಾ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಚಿಂತಾಮಣಿ ತಾಲ್ಲೂಕಿನಲ್ಲಿ 265 ಅಂಗನವಾಡಿ ಕೇಂದ್ರಗಳು ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಸೇರಿದ ಚೇಳೂರು ಹೋಬಳಿಯಲ್ಲಿ 44 ಅಂಗನವಾಡಿ ಕೇಂದ್ರಗಳು ಇರುತ್ತವೆ.

298 ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಕೆಲಸ ನಿರ್ವಹಿಸುತ್ತಿದ್ದಾರೆ.

ಚಿಂತಾಮಣಿ ತಾಲ್ಲೂಕಿನ 2 ಅಂಗನವಾಡಿ ಕೇಂದ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆ ಖಾಲಿ ಇರುತ್ತವೆ.

ಆ) 1999-2000, 2001-02ರ ವರ್ಷಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯಕರ್ತೆಯರು ಹುದ್ದೆ ಬಿಟ್ಟು ಹೋದಾಗ ಆ ಕೇಂದ್ರಗಳಿಗೆ ನಿಯಮಾನುಸಾರ ಹೊಸ ಕಾರ್ಯಕರ್ತೆಯರನ್ನು ಗುರ್ತಿಸಲಾಗಿದೆ.

ಇ) ಹೌದು, ಒಂದು ಯೋಜನೆಯಲ್ಲಿ 5 ಕ್ಕಿಂತ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇದ್ದಾಗ ತಾಲ್ಲೂಕು ಮಟ್ಟದ ಸಮಿತಿಯು ಅಂಗನವಾಡಿ ಕಾರ್ಯಕರ್ತೆಯರನ್ನು ಗುರ್ತಿಸುತ್ತದೆ. ಈ ಸಮಿತಿಯು ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ.

ಕ್ರ.ಸಂ.	ಸಮಿತಿ ಸದಸ್ಯರ ವಿವರ
1. ಅಧ್ಯಕ್ಷರು	- ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ
2. ಉಪಾಧ್ಯಕ್ಷರು	- ಜಿಲ್ಲಾ ಸಹಾಯಕ ನಿರ್ದೇಶಕರು
3. ಸದಸ್ಯರು	- ಸ್ಥಳೀಯ ಶಾಸಕರು
4. ಸದಸ್ಯರು	- ತಾಲ್ಲೂಕು ಪಂಚಾಯತ್ ಅಧ್ಯಕ್ಷರು
5. ಸದಸ್ಯ ಕರ್ಯಾದರ್ಶಿ	- ಶಿ.ಅ.ಯೋ.ಅ.

ಕ್ರ.ಸಂ. 3 ಮತ್ತು 4 ರಲ್ಲಿ ಪರಿಶಿಷ್ಟ ಜಾತಿ/ ಪ.ಪಂ. ಅಥವಾ ಮಹಿಳೆಯರನ್ನು ಪ್ರತಿನಿಧಿಸದೇ ಇದ್ದರೆ ಆ ವರ್ಗಗಳ ಹಿತಾಸಕ್ತಿ ಕಾಯಲು ಜಿಲ್ಲಾ ಪಂಚಾಯಿತಿಯಿಂದ ನಾಮಕರಣವಾಗುವ ಒಬ್ಬ ಜಿಲ್ಲಾ ಪಂಚಾಯತ್ ಸದಸ್ಯರು ಸದಸ್ಯರಾಗಿರುತ್ತಾರೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ 300 ಅಂಗನವಾಡಿ ಕೇಂದ್ರಗಳು ಇವೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದರಲ್ಲಿ ಎರಡು ಅಂಗನವಾಡಿ ಕೇಂದ್ರಗಳಿಗೆ ಅಂಗನವಾಡಿ ಕಾರ್ಯಕರ್ತರನ್ನು ಅಪಾಯಿಂಟ್‌ಮೆಂಟ್ ಮಾಡಿಲ್ಲ. ಇಲ್ಲಿ ಏನಾಗಿದೆಯೆಂದರೆ, ನಮ್ಮದು ಆಂಧ್ರ ಪ್ರದೇಶದ ಬಾರ್ಡರ್‌ನಲ್ಲಿದ್ದು ಬಡಜನರು ಬಹಳ ಇದ್ದಾರೆ. ಇಲ್ಲಿ ಇರತಕ್ಕಂಥ ಅಂಗನವಾಡಿ ಕೇಂದ್ರಗಳೂ ಕೂಡ ಕಡಿಮೆ ಇರುವುದರಿಂದ ಹಿಂದೆ ಒಂದು ಬಾರಿ ಹೆಚ್ಚು ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಶಿಫಾರಸ್ಸು ಮಾಡಬೇಕೆಂದು ಕೇಳಿದ್ದೇನೆ. ಇದರ ಜೊತೆಗೆ ಈಗ ಬಾಲವಾಡಿ ಕೇಂದ್ರಗಳೂ ಕೂಡ ಬಂದುಬಿಡ್ತಾ ಇವೆ. ಎಲ್ಲಿ ಅಂಗನವಾಡಿ ಕೇಂದ್ರಗಳು ಇಲ್ಲವೋ ಅಲ್ಲಿ ಬಾಲವಾಡಿ ಕೇಂದ್ರಗಳು ಬರುತ್ತಿವೆ. ನಾವು ಶಾಸಕರಾಗಿ ಯಾವ ಅಸಿಸ್ಟೆನ್ಸ್‌ನ್ನು ಅದಕ್ಕೆ ಕೊಡುವುದಕ್ಕೆ ಬರುವುದಿಲ್ಲ. ಕಳೆದ ಬಾರಿ ನಾನು 300 ಅಂಗನವಾಡಿ ಕೇಂದ್ರಗಳಲ್ಲಿ ಎಷ್ಟು ಕೇಂದ್ರಗಳಿಗೆ ಕಟ್ಟಡಗಳಿಲ್ಲವೆಂದು ಕೇಳಿದಾಗ ಅವರು ಸುಮಾರು 250 ಕೇಂದ್ರಗಳಿಗೆ ಕಟ್ಟಡಗಳು ಇಲ್ಲವೆಂದು ಹೇಳಿದ್ದರು. ನಮ್ಮ ಹತ್ತಿರ ದುಡ್ಡಿಲ್ಲ, ಪಾರ್ಲಿಮೆಂಟ್ ಸದಸ್ಯರಿಂದ ಕೊಡಿಸುವ ಹಾಗೆ ವ್ಯವಸ್ಥೆ ಮಾಡಿ ಎಂದು ಹೇಳಿದರು. ನಮಗೆ ಶಾಸಕರ ಅನುದಾನ ಬರುತ್ತದೆ ಎಂದು ಹೇಳಿ ಸರ್ಕ್ಯುಲರ್ ಬಂತು, ಅದರಲ್ಲಿ ನಾವು 19 ಕೇಂದ್ರಗಳಿಗೆ ಕಟ್ಟಡವನ್ನು ಕಟ್ಟಿಸುತ್ತಾ ಇದ್ದೇವೆ. ಚೆಕ್‌ಗಳು ಹಾನರ್ ಆದರೆ 19 ಕಟ್ಟಡಗಳು ಬರುತ್ತವೆ. ಈಗ ಎಲ್ಲೆಲ್ಲಿ ಬಾಲವಾಡಿ ಕೇಂದ್ರಗಳು ಇವೆಯೋ ಅಲ್ಲಿಲ್ಲಾ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕೆಂದು ಮಾನ್ಯ ತಮ್ಮ ಮುಖಾಂತರ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಈ ಅಂಗನವಾಡಿ ಕಟ್ಟಡ ಕಟ್ಟುವುದರ ಬಗ್ಗೆ ಮಾನ್ಯ ಸದಸ್ಯರು ಕೇಳಿಲ್ಲ.

ಶ್ರೀ ಚೌಡರೆಡ್ಡಿ: ನಾನು ಹೋದ ಬಾರಿ ಕೇಳಿದ್ದೆ.

ಶ್ರೀಮತಿ ಮೋಟಮ್ಮ: ನೀವು ಹೋದ ಸಾರಿ ಕೇಳಿದ್ದಿರಿ. ಆದರೆ ಈ ವರ್ಷದ ಇವ್ತೊತ್ತಿನ ಪ್ರಶ್ನೆ ಬೇರೆ ತರಹ ಇದೆ. ಅಂಗನವಾಡಿ ಕೇಂದ್ರಗಳು ಎಷ್ಟಿವೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಎಷ್ಟು ಖಾಲಿ ಇವೆ ಎಂಬ ಬಗ್ಗೆ ನೀವು ಕೇಳಿದ್ದಿರಿ. ಅದನ್ನು ಹೀಗೆ

ಡೈವರ್ಟ್ ಮಾಡಿಕೊಂಡರೆ ಹೇಗೆ? ಈ ಪ್ರಶ್ನೆಗೆ ತಕ್ಕಂತೆ ಕ್ಲಾರಿಫಿಕೇಷನ್ ಕೇಳಿದರೆ ಉತ್ತರ ಕೊಡಬಹುದು. ಅಂಗನವಾಡಿ ಕಟ್ಟಡ ಕಟ್ಟುವ ವಿಚಾರ ನಮ್ಮ ಇಲಾಖೆಯಲ್ಲಿ ಬಹಳ ಮಹತ್ವವಾದ ಕೆಲಸವಾಗಿದೆ. ನಾನು ಈಗಾಗಲೇ ಹೇಳಿರುವಂತೆ ಡಿಪಾರ್ಟ್‌ಮೆಂಟ್‌ನಿಂದ 50 ಪರ್ಸೆಂಟ್ ಹಾಗೂ ಜಿಲ್ಲಾ ಪರಿಷತ್‌ನಿಂದ 50 ಪರ್ಸೆಂಟ್ ಹಣವನ್ನು ಹಾಕಿ ಅಂಗನವಾಡಿ ಕಟ್ಟಡವನ್ನು ಕಟ್ಟಬೇಕೆನ್ನುವ ನಿಯಮ ಈಗಾಗಲೇ ಇತ್ತು. ಆದರೆ ಜಿಲ್ಲಾ ಪರಿಷತ್‌ನವರು ಆದಕ್ಕೆ ಪ್ರೈಯಾರಿಟಿ ಕೊಡದೇ ಇದ್ದಾಗ ನಾವೇ ನಮ್ಮ ಇಲಾಖೆಯಿಂದ 100 ಪರ್ಸೆಂಟ್ ಗ್ರಾಂಟ್ ಕೊಟ್ಟು ಕಟ್ಟಡವನ್ನು ಕಟ್ಟಬೇಕೆನ್ನುವ ಉದ್ದೇಶದಿದ ಈಗ ನಾವು ನಬಾರ್ಡ್‌ನವರನ್ನು ಸಾಲ ಕೇಳಿದ್ದೇವೆ. ಅದಕ್ಕೆ ಅವರ ಒಪ್ಪಿಗೆಯಾಗಿದೆ. ಅದು ರಿಲೀಸ್ ಆದತಕ್ಷಣ ಎಲ್ಲೆಲ್ಲಿ ಅಂಗನವಾಡಿ ಕಟ್ಟಡಗಳನ್ನು ಕಟ್ಟಬೇಕೋ ಅಲ್ಲೆಲ್ಲಾ ಅದನ್ನು ಕಟ್ಟುತ್ತೇವೆ. ಆದರೆ ಇವೊತ್ತು ನೀವೇನು ಪ್ರಶ್ನೆ ಕೇಳಿದ್ದಿರೋ ಅದಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಕ್ಲಾರಿಫಿಕೇಷನ್ ಕೇಳುವುದಿದ್ದರೆ ಕೇಳಿ, ನಾನು ಅವುಗಳಿಗೆ ಉತ್ತರ ಹೇಳುತ್ತೇನೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ಅಂಗನವಾಡಿ ಕಾರ್ಯಕರ್ತರನ್ನು ನೇಮಕ ಮಾಡಬೇಕಾದಾಗ ಬಹಳ ಸಲ 4, 5 ಹುದ್ದೆಗಳು ಇರುತ್ತದೆ. ಆದರೆ ನಮಗೆ ಆ ವಿಚಾರ ಗೊತ್ತೇ ಆಗುವುದಿಲ್ಲ. ಇಷ್ಟೊಂದು ಕಮಿಟಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಶಾಸಕರು ಆ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಒಂದು ಕಮಿಟಿ ಇದೆ ಎಂದು ಎರಡೂವರೆ ವರ್ಷಗಳಾದರೂ ಒಂದು ಸರ್ಕ್ಯುಲರ್ ನನಗೆ ಕಳುಹಿಸಿಲ್ಲ. ಜೊತೆಗೆ ಬಡವರ ಹತ್ತಿರ ಅವ್ಯವಹಾರ ನಡೆಯುತ್ತಿದೆ. 5 ಪೋಸ್ಟ್ ಇದ್ದರೂ ಕೂಡ 2 ಇದೆ ಎಂದು ಹೇಳುವುದು, ಅವರ ಹತ್ತಿರ ಅವ್ಯವಹಾರ ಮಾಡಿ ಹೆಚ್ಚು ಕಡಿಮೆ ಆಗತ್ತಿದೆ. ಇವೊತ್ತು 5 ಎನ್ನುವುದನ್ನು ತೆಗೆದುಬಿಟ್ಟು ಎರಡಕ್ಕೂ ಇಳಿಸಿ ಈ ನಮ್ಮ ಕಮಿಟಿಯವರು ಅದರಲ್ಲಿ ಸೆಲೆಕ್ಷನ್ ಮಾಡಬೇಕು ಎಂದು ಆದೇಶ ಹೊರಡಿಸಬೇಕೆಂದು ತಮ್ಮ ಮೂಲಕ ಕೇಳುತ್ತಿದ್ದೇನೆ. ಏಕೆಂದರೆ ಬಡವರಿಗೆ ಅವ್ಯವಹಾರ ಆಗಬಾರದು ಎನ್ನುವ ಉದ್ದೇಶದಿಂದ ತಮಗೆ ಈ ಸಲಹೆ ನೀಡುತ್ತಿದ್ದೇನೆ.

ಶ್ರೀಮತಿ ಮೋಟಮ್ಮ: ನಾವೇನು ಕಮಿಟಿ ಎಂದು ಮಾಡಿಕೊಂಡಿದ್ದೇವೆ ಅದು ಸರಿಯಾಗಿದೆ. 5 ಕ್ಕಿಂತ ಹೆಚ್ಚು ಅಂಗನವಾಡಿ ಕಾರ್ಯಕರ್ತರ ಹುದ್ದೆಗಳು ಇದ್ದರೆ ಈ ಸಮಿತಿಯವರು ಆಯ್ಕೆ ಮಾಡಬೇಕೆಂದು ಹೇಳಲಾಗಿದೆ. 5 ಕ್ಕಿಂತ ಕಡಿಮೆ ಅಂಗನವಾಡಿ ಕಾರ್ಯಕರ್ತರ ಹುದ್ದೆಗಳು ಇದ್ದರೆ ಅಲ್ಲಿ ನಮ್ಮ ಡಿ.ಪಿ.ಓ. ರವರು ಅಪ್ಲಿಕೇಷನ್ ಕರೆದು ನೇಮಕ ಮಾಡಬೇಕು ಎನ್ನುವ ನಿಯಮ ಇದೆ. ಈ ರೀತಿ ಸಿ.ಪಿ.ಡಿ.ಓ. ರವರು ಆಯ್ಕೆ ಮಾಡಬೇಕಾದರೆ ಅವ್ಯವಹಾರ ನಡೆಯುತ್ತದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಾವೇ ಶಾಸಕರು ಅಲ್ಲಿ ಇರುತ್ತೀರಿ, ಅಂಥದ್ದನ್ನು ತಾವು ನೋಡಬೇಕು, ಹೆಚ್ಚು ಕಡಿಮೆ ನಮಗೆ ಗೊತ್ತಿರುವ ಹಾಗೆ ಯಾವ ಗ್ರಾಮ ಪಂಚಾಯತಿಯಲ್ಲಿ ಅಂಗನವಾಡಿ ಕಾರ್ಯಕರ್ತರ ಹುದ್ದೆ ಖಾಲಿಯಾಗುತ್ತದೆ ಮತ್ತು ಯಾರಿಗೆ ಎಲಿಜಿಬಿಲಿಟಿ ಬರುತ್ತದೆ ಎನ್ನುವುದನ್ನು ನಾವೇ ಗುರುತಿಸುತ್ತೇವೆ. ಆಕ್ಚುಯಲಿ ಇಂಥವರಿಗೆ ಕೊಟ್ಟರೆ ಸರಿ ಹೋಗುತ್ತದೆ ಎಂದು ಹೇಳುತ್ತೇವೆ. ಅದೇ ರೀತಿಯಲ್ಲಿ ನೇಮಕವಾದಾಗ ಅವ್ಯವಹಾರದ ಪ್ರಶ್ನೆಯೇ ಉದ್ಭವವಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಒಂದು ವೇಳೆ ಅದರಲ್ಲಿ ಅವ್ಯವಹಾರ ನಡೆದಿರುವುದನ್ನು ಸ್ಪಷ್ಟವಾಗಿ ನಮ್ಮ ಗಮನಕ್ಕೆ ತಂದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಲು ನಾವು ಹಿಂಜರಿಯುವುದಿಲ್ಲ.

ಶ್ರೀ ವಿ. ಕೃಷ್ಣಪ್ಪ: ಈಗ 5 ಕ್ಕಿಂತ ಕಡಿಮೆ ಹುದ್ದೆಗಳಿದ್ದಾಗ ನೇಮಕ ಮಾಡುವುದಕ್ಕೆ ಅವರಿಗೆ ಅಧಿಕಾರ ಕೊಟ್ಟಿದ್ದೀರಿ, ಅವೆಲ್ಲಾ ಜಿಲ್ಲಾ ಪರಿಷತ್‌ನ ಕಂಟ್ರೋಲ್‌ನಲ್ಲಿ ಬರುತ್ತವೆ. ಜಿಲ್ಲಾ ಪರಿಷತ್‌ನಲ್ಲಿ ಏನು ಮಾಡುತ್ತಾರೆ ಅಂದರೆ ಐದಕ್ಕಿಂತ ಕಡಿಮೆ ಮಾಡಿಬಿಟ್ಟು ಅವರೇ ನೇಮಕ ಮಾಡುತ್ತಾರೆ. ನಮ್ಮ ಗಮನಕ್ಕೆ ಬರುವುದಿಲ್ಲ. ಅವ್ಯವಹಾರ ನಡೆದಿದ್ದರೆ ತಮ್ಮ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ನೀವು ಹೇಳುತ್ತೀರಿ. ನಾನು ಕಾಗದ ಬರೆದು, ಇಂಥದ್ದರಲ್ಲಿ ಅವ್ಯವಹಾರ ನಡೆದಿದೆ, ಆ ಹುದ್ದೆ ಸಲ್ಲಬೇಕಾದವರಿಗೆ ಸರಿಯಾಗಿ ಸಲ್ಲಲಿಲ್ಲ, ದಯವಿಟ್ಟು ಅದನ್ನು ಬದಲಾವಣೆ ಮಾಡಿ ಬೇರೆಯವರಿಗೆ ಕೊಡಿ ಎಂದು ಹೇಳಿದ್ದೆ. ಮಂತ್ರಿಗಳಿಂದ ಅದಕ್ಕೆ ಉತ್ತರ ಬರಲೇ ಇಲ್ಲ. ಜಿಲ್ಲಾ ಪರಿಷತ್‌ನವರು ನೇಮಕ ಮಾಡಿದ್ದಾರೆ. ದಯವಿಟ್ಟು ಮಂತ್ರಿಗಳು ಇದಕ್ಕೆ ಉತ್ತರ ಹೇಳಬೇಕು.

ಶ್ರೀಮತಿ ಮೋಟಮ್ಮ: ನೀವು ಸ್ಪಷ್ಟವಾಗಿ ಹೇಳದೇ ಹೋದರೆ ನಾನು ಹೇಗೆ ಕ್ರಮ ತೆಗೆದುಕೊಳ್ಳಲಿ.

ಶ್ರೀ ಆರಗ ಜ್ಞಾನೇಂದ್ರ : ಜಿಲ್ಲಾ ಪಂಚಾಯತಿಗಳು ಬಂದುಬಿಟ್ಟು ಎಂ.ಎಲ್.ಎ.ಗಳಿಗೆ ಬೆಲೆಯೇ ಇಲ್ಲದ ಹಾಗೆ ಆಗಿದೆ.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ನನಗೆ ಅರ್ಥವಾಯಿತು. ಆದರೆ ಅವರು ಸ್ಪೆಸಿಫಿಕ್ ಆಗಿ ಹೇಳಬೇಕು. ಏಕೆಂದರೆ ಎಲ್ಲಾ ತಾಲ್ಲೂಕ್ ಲೆವೆಲ್ ಆಫೀಸರ್‌ಗಳು ಎಂ.ಎಲ್.ಎ.ಗಳ ಆದೇಶವನ್ನು ಮೀರಲಿಕ್ಕೆ ತಯಾರಿಲ್ಲ. ತಹಶೀಲ್ದಾರ್ ಇರಬಹುದು, ನಮ್ಮ ಸಿ.ಡಿ.ಪಿ.ಓ. ಇರಬಹುದು, ಇ.ಓ. ಇರಬಹುದು. ಹೆಚ್ಚು ಕಡಿಮೆ ಎಲ್ಲಾ ತಹಶೀಲ್ದಾರರವರ ಒಂದು ಆದೇಶದ ಮೇಲೆಯೇ ಕೆಲಸ ಮಾಡಿಕೊಂಡು ಹೋಗುತ್ತಾರೆ.

ಶ್ರೀ ವಿ. ಕೃಷ್ಣಪ್ಪ: ಹಾಗಿದ್ದ ಮೇಲೆ ಶಾಸಕರನ್ನೇಕೆ ಸಮಿತಿ ಸದಸ್ಯರನ್ನಾಗಿ ಮಾಡಿದ್ದೀರಿ? ಅವರನ್ನು ತೆಗೆದುಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್: ಡೆಪ್ಯುಟಿ ಸೆಕ್ರೆಟರಿಯವರನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಇಲ್ಲದಿದ್ದರೆ ಶಾಸಕರನ್ನು ಸಮಿತಿಯಿಂದಲೇ ಕಿತ್ತುಹಾಕಿ ಬಿಡಿ.

ಅಧ್ಯಕ್ಷರು: ಅಂಗನವಾಡಿ ಕಾರ್ಯಕರ್ತರ ಹುದ್ದೆ ಖಾಲಿಯಾದಾಗ ಶಾಸಕರಿಗೆ ತಿಳಿಸಿದ ಮೇಲೆ ಹುದ್ದೆಯನ್ನು ನೇಮಕ ಮಾಡುವಂತೆ ತಾವು ಏರ್ಪಾಡು ಮಾಡಿ. ಅಷ್ಟು ಏರ್ಪಾಡನ್ನು ಮಾಡಿ.

ಶ್ರೀ ವಿ. ಕೃಷ್ಣಪ್ಪ : ಶಾಸಕರಿಗೆ ವಿಷಯ ತಿಳಿಸಿ ಅವರೇ ನೇಮಕ ಮಾಡಿಕೊಂಡು ಬಿಡುವುದೇ?

ಅಧ್ಯಕ್ಷರು: ಇಲ್ಲ, ಇಲ್ಲ. ನಿಮಗೆ ತಿಳಿಸಿದ ಮೇಲೆ ನೀವು ಇಂಥ ರೀತಿಯಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದು ನೀವು ಹೇಳಿಯೇ ಹೇಳುತ್ತೀರಿ. ಎಲ್ಲಾ ಸದಸ್ಯರೂ ಕೂಡ ಅದೇ ರೀತಿ ಹೇಳುತ್ತಾರೆ. ಇಂಥ ನಿಯಮ ಹಾಕಿ ಎಂದು ಹೇಳಿಯೇ ಹೇಳುತ್ತೀರಿ. ನಾನೂ ಕೂಡ ಆ

ರೀತಿ ಮಾಡಿ ಎಂದು ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳೇ, ಶಾಸಕರನ್ನು ಈ ವಿಚಾರದಲ್ಲಿ ಕನ್‌ಸಲ್ಟ್ ಮಾಡಲೇಬೇಕು ಎಂದು ತಾವು ದಯವಿಟ್ಟು ಹೇಳಿ.

ಶ್ರೀಮತಿ ಮೋಟಮ್ಮ: ಶಾಸಕರೂ ಕೂಡ ಸಮಿತಿಯಲ್ಲಿ ಸದಸ್ಯರಾಗಿದ್ದಾರೆ.

ಅಧ್ಯಕ್ಷರು: ಕಾಗದದಲ್ಲಿ ಇದೆಯಷ್ಟೆ. ಆದರೆ ಶಾಸಕರನ್ನು ಕನ್‌ಸಲ್ಟ್ ಮಾಡುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀಮತಿ ಮೋಟಮ್ಮ: ಅವರ ಪ್ರಶ್ನೆ ಅದಲ್ಲ. ಆ ಆಯ್ಕೆ ಸಮಿತಿಗೆ ಶಾಸಕರು ಅಧ್ಯಕ್ಷರಾಗಿರಬೇಕು ಎಂದು ಹೇಳುತ್ತಿದ್ದಾರೆ. ಸರ್ಕಾರದ ಯಾವುದೇ ನೇಮಕಾತಿ ಸಮಿತಿಯಲ್ಲಿ ಶಾಸಕರ ಅಧ್ಯಕ್ಷತೆ ಇಲ್ಲ. ಆದುದರಿಂದ ಈ ಸಮಿತಿಯಲ್ಲಿ ಶಾಸಕರೂ ಕೂಡ ಒಬ್ಬ ಸದಸ್ಯರನ್ನಾಗಿ ಮಾಡಿದೆ. ಉಪ ಕಾರ್ಯದರ್ಶಿಯ ಕೆಳಗೆ ನಾವು ಸದಸ್ಯರಾಗಿರುವುದು ಸರಿಯಲ್ಲವೆಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ಅವರು ಹೇಳುತ್ತಿರುವುದೂ ಕೂಡ ಕರೆಕ್ಟ್. ಏಕೆಂದರೆ ಆರ್ಡಿನರಿ ಅಂಡರ್ ಸೆಕ್ರೆಟರಿ ಮುಂದೆ ನಾವು ಅಲ್ಲಿ ಸದಸ್ಯರಾಗಿ ಕುಳಿತುಕೊಳ್ಳುವುದು ಯಾವ ಲೆಕ್ಕಾಚಾರ?

ಶ್ರೀಮತಿ ಮೋಟಮ್ಮ: ಆದರೆ ಯಾವುದೇ ಸರ್ಕಾರದ ಆಯ್ಕೆ ಸಮಿತಿಗೆ ಶಾಸಕರು ಅಧ್ಯಕ್ಷರಾಗಿರುವುದಿಲ್ಲವಲ್ಲಾ.

Mr. Speaker: I don't like it. ಅಂಡರ್ ಸೆಕ್ರೆಟರಿ ಮುಂದೆ ನಾವು ಹೋಗಿ ಸದಸ್ಯರಾಗಿ ಕುಳಿತುಕೊಳ್ಳುವುದು ಅದು ಸರಿಬರುವುದಿಲ್ಲ. ದಯವಿಟ್ಟು ಅದನ್ನು ಚೇಂಜ್ ಮಾಡಿ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಒಂದು ಹುದ್ದೆ ಇರಲಿ, ಎರಡು ಹುದ್ದೆಗಳಿರಲಿ, ಆಯ್ಕೆ ಸಮಿತಿ ಅಧ್ಯಕ್ಷರು ಶಾಸಕರೇ ಆಗಬೇಕು, ಒಂದು ಪೋಸ್ಟ್ ಇದ್ದರೂ ಕೂಡ ಮೀಟಿಂಗ್ ಕರೆದೇ ನೇಮಕ ಮಾಡಬೇಕು ಎನ್ನುವ ಹಾಗೆ ನಿಯಮ ಮಾಡಬೇಕು.

ಅಧ್ಯಕ್ಷರು: ನಾನು ಇಷ್ಟು ಮಾತ್ರ ಹೇಳುತ್ತೇನೆ ಕೇಳಿ. ನಾನು ಅನೇಕ ಬಾರಿ ತಾಲ್ಲೂಕು ಸಮಿತಿ ಸಭೆಯ ಮೀಟಿಂಗ್ ಅಟೆಂಡ್ ಮಾಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಪ್ರೋಟೋಕಾಲ್ ಫಾಲೋ- ಮಾಡಿದ್ದೇವೆ. ಬೇರೆ ತಾಲ್ಲೂಕಿನಲ್ಲೂ ಫಾಲೋ ಮಾಡುತ್ತೇವೆ, ಅಲ್ಲಿ ಹೋಗಿ ಅಂಡರ್ ಸೆಕ್ರೆಟರಿ ಮುಂದೆ ನಾನು ಕೆಳಗಡೆ ಕುಳಿತರೆ ಏನರ್ಥ?

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಆ ಅವಕಾಶವೇ ಬಂದಿಲ್ಲ. 5ಕ್ಕಿಂತ ಹೆಚ್ಚು ಹುದ್ದೆಗಳು ಇದ್ದಾಗ ಮಾತ್ರ ಈ ಕಮಿಟಿ ಸೇರುವುದು.

ಅಧ್ಯಕ್ಷರು: ಆ ರೀತಿ ಅವಕಾಶ ಬಂದಾಗ ಎನ್ನುವ ಬಗ್ಗೆಯೇ ನಾನು ಹೇಳುತ್ತಿರುವುದು. ಆದುದರಿಂದ ಮೋಟಮ್ಮನವರೇ, ನೀವು ಅಮೆಂಡ್‌ಮೆಂಟ್ ಮಾಡಿ.

ಶ್ರೀ ಆರಗ ಜ್ಞಾನೇಂದ್ರ: ಒಳ್ಳೆಯ ಸಲಹೆಯನ್ನು ತಾವು ಕೊಟ್ಟಿರಿ ಸಾರ್.

ಅಧ್ಯಕ್ಷರು: ತಮ್ಮಗಳೆಲ್ಲರ ಸಲಹೆ ಮೇರೆಗೆ ನಾನೂ ಕೂಡ ಹೇಳಿದ್ದೇನೆ. ಅದಕ್ಕೆ ಸೂಕ್ತ ಕಾರ್ಯಕ್ರಮವನ್ನು ಮಂತ್ರಿಗಳು ಕೈಗೊಳ್ಳುತ್ತಾರೆ. ಇನ್ನು ಈ ವಿಚಾರ ಇಲ್ಲಿಗೇ ಬಿಡಿ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಮಂತ್ರಿಗಳು ಸದನದಲ್ಲಿ ಆ ರೀತಿ ಹೇಳಬೇಕು. ನೀವು ಹೇಳಿದರೂ ಕೂಡ ನಿಮ್ಮ ಮಾತಿಗೆ ಬೆಲೆ ಇಲ್ಲ ನೋಡಿ.

ಶ್ರೀಮತಿ ಮೋಟಮ್ಮ: ಮಾನ್ಯ ಸಭಾಧ್ಯಕ್ಷರೆ, ನಿಮ್ಮ ಮಾತಿಗೆ ಬೆಲೆ ಇಲ್ಲವೆಂದು ಅವರು ಹೇಳುತ್ತಿದ್ದಾರಲ್ಲಾ, ನಾನು ಹಾಗೇನಾದರೂ ನಡೆದುಕೊಂಡೆನೇ?

ಅಧ್ಯಕ್ಷರು: ಇಲ್ಲ, ಇಲ್ಲ.

ಶ್ರೀಮತಿ ಮೋಟಮ್ಮ: ತಾವೇನು ಹೇಳಿದ್ದೀರಿ ಆ ಬಗ್ಗೆ ವಿಚಾರ ಮಾಡಿ ನಾನು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾನು ಈಗಲೇ ದಿಢೀರನೆ ಹೇಳಿಬಿಟ್ಟು ನಂತರದಲ್ಲಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ನಿಯಮ ಬಂದರೆ ಇನ್ನೊಮ್ಮೆ ನನಗೆ ಇದನ್ನೇ ಕೇಳುತ್ತೀರಿ.

ಅಧ್ಯಕ್ಷರು: ವಿಚಾರ ಮಾಡಿ ಎಂದೇ ಹೇಳುತ್ತಿರುವುದು. ಕಡೆಯದಾಗಿ ಉಪ ಪ್ರಶ್ನೆಯನ್ನು ಮಾನ್ಯ ಜ್ಞಾನೇಂದ್ರರವರೇ, ಕೇಳಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತರಿಗೆ ಸೂಪರ್ ವೈಸರ್ ಹುದ್ದೆಯನ್ನು ಕೊಡುವ ಬಗ್ಗೆ ಮತ್ತು ಇದೇ ಸೂಪರ್ ವೈಸರ್ ಹುದ್ದೆಯನ್ನು ಸ್ವಲ್ಪ ಭಾಗ ನೇರ ನೇಮಕಾತಿಯಲ್ಲೂ ತುಂಬುವ ಬಗ್ಗೆ ಅವರ ಇಲಾಖೆಯಿಂದ ಕಾಲ್‌ಫರ್ ಮಾಡಿದ್ದಾರೆ. ಈ ಹುದ್ದೆಗೆ ಸಾವಿರಾರು ಜನರು ಅರ್ಜಿ ಹಾಕುತ್ತಿದ್ದಾರೆ. ಇವತ್ತು ಈ ಸೂಪರ್ ವೈಸರ್ ಹುದ್ದೆಗೆ ನಮಗೇ ಹೆಚ್ಚಿನ ಸ್ಥಾನವನ್ನು ಮೀಸಲಿಡಬೇಕೆಂದು ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಇದೆ. ಏಕೆಂದರೆ 10, 15 ವರ್ಷಗಳಿಂದ ಅವರು 500 ರೂಪಾಯಿಗಳು, 800 ರೂಪಾಯಿಗಳು, 1000 ರೂಪಾಯಿಗಳು, ವೇತನದಲ್ಲಿ ಅಂಗನವಾಡಿ ಕಾರ್ಯಕರ್ತೆಯರಾಗಿ ಕೆಲಸ ಮಾಡಿದ್ದಾರೆ. ಇರುವವರಲ್ಲಿಯೇ ಕ್ವಾಲಿಫಿಕೇಷನ್ ಇರುವಂಥವರಿಗೆ ಸೂಪರ್ ವೈಸರ್ ಸ್ಥಾನವನ್ನು ಹೆಚ್ಚು ಮೀಸಲಾಗಿಟ್ಟು ಅಂಗನವಾಡಿ ಕಾರ್ಯಕರ್ತೆಯರಿಗೆ ಆ ಹುದ್ದೆಗೆ ನೇಮಕ ಮಾಡಿದರೆ ಒಳ್ಳೆಯದು. ಏಕೆಂದರೆ ಆ ಹೆಣ್ಣು ಮಕ್ಕಳು ಬಹಳ ವರ್ಷಗಳಿಂದ ದುಡಿದುಕೊಂಡು ಬಂದಿರುವುದರಿಂದ ಹೆಚ್ಚಿನ ಅನುಭವವೂ ಕೂಡ ಇರುತ್ತದೆ. ದಯವಿಟ್ಟು ಮಂತ್ರಿಗಳು ಒಬ್ಬ ಪರಿಶಿಷ್ಟ ಜನಾಂಗದಿಂದ ಬಂದಿರುವಂಥವರು ಆಗಿರುವುದರಿಂದ ಬಹಳ ವರ್ಷದಿಂದ ಕೆಲಸ ಮಾಡಿರತಕ್ಕಂಥ ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಪರ್ ವೈಸರ್ ಹುದ್ದೆಯನ್ನು ಹೆಚ್ಚು ಸೃಷ್ಟಿ ಮಾಡುವುದಕ್ಕೆ ಅಂದರೆ ಪರ್ಸೆಂಟೇಜ್ ಅನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನವನ್ನೇನಾದರೂ ಮಾಡುತ್ತೀರಾ?

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಇಂದು ಕೇಳಿರುವ ಪ್ರಶ್ನೆಯೊಳಗೆ ಬರುವುದಿಲ್ಲ. ಆದರೂ ಶಾಸಕರ ಕಳಕಳಿಗೆ ಮತ್ತು ಎಲ್ಲಾ ಶಾಸಕರಿಗೂ ಗೊತ್ತಾಗಲಿ ಎಂದು ಅವರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನಿಮ್ಮಷ್ಟೇ ಮುತುವರ್ಜಿ, ಕಾಳಜಿ ಇರುವ ದಿಸೆಯಿಂದ ಈಗ ಕರೆದಿರುವ 1355 ಪೋಸ್ಟ್‌ನಲ್ಲಿ 40 ಪರ್ಸೆಂಟ್ ಅಂಗನವಾಡಿ ಕಾರ್ಯಕರ್ತೆಯರಿಗೆ ರಿಸರ್ವೇಷನ್ ಇಟ್ಟಿದ್ದೇವೆ. ಅದರಲ್ಲಿ ಹತ್ತು ವರ್ಷ ಸರ್ವೀಸ್ ಆಗಿರಬೇಕು ಮತ್ತು ಎಸ್.ಎಸ್.ಎಲ್.ಸಿ. ಮೇಲೆ ಪಾಸಾಗಿರಬೇಕು ಎಂದು ಹೇಳಿದೆ. ಇನ್ನು 60 ಪರ್ಸೆಂಟ್ ಡೆರೆಕ್ಟ್ ಡಿಗ್ರಿ ಹೋಲ್ಡರ್ಸ್‌ಗೆ ಇದೆ. ಅದರಲ್ಲೂ ಹೋಮ್ ಸೈನ್ಸ್, ಸೋಷಿಯಾಲಜಿಯಲ್ಲಿ ಡಿಗ್ರಿ ಮಾಡಿದ ಹೆಣ್ಣು ಮಕ್ಕಳಿಗಾಗಿ ನಾವು ಈ 60 ಪರ್ಸೆಂಟ್ ಇಟ್ಟಿದ್ದೇವೆ.

ಈಗ ಬಹಳ ಕಡೆ ಒತ್ತಡ ಬರುತ್ತಿದೆ, ಶಾಸಕರಿಂದಲೂ ಪತ್ರ, ಫೋನ್‌ಗಳು ಬರುತ್ತಿವೆ, ಈ ನಮ್ಮ ಅಂಗನವಾಡಿ ಟೀಚರ್‌ಗೆ ಆಯ್ಕೆ ಮಾಡಬೇಕು ಎಂದು. ಆ ರೀತಿಯಲ್ಲಿ ಶಾಸಕರ ಶಿಫಾರಸ್ ಮೇಲೆ ನಾನು ಆಯ್ಕೆ ಮಾಡುವುದಕ್ಕೆ ಬರುವುದಿಲ್ಲ. ಸರ್ವೀಸ್ ಪ್ಲಸ್ ಎಸ್.ಎಸ್.ಎಲ್.ಸಿ. ಮಾರ್ಕ್ಸ್‌ನಲ್ಲಿ ಮೆರಿಟ್ ಇರಬೇಕು, ಅಥವಾ ಪಿ.ಯು.ಸಿ. ಯಲ್ಲಿ ಮೆರಿಟ್ ಇರಬೇಕು, ಆದರಲ್ಲಿ ಡಿಗ್ರಿ ಆಗಿರುವ ಅಂಗನವಾಡಿ ವರ್ಕರ್ಸ್ ಇದ್ದಾರೆ. ಅವರಲ್ಲೂ ಮೆರಿಟ್ ಇದ್ದರೆ ಸರ್ವೀಸ್ ಜೊತೆಯಲ್ಲಿ ಅದನ್ನು ಇನ್‌ಕ್ಲೂಡ್ ಮಾಡಿಕೊಂಡು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ. ದಯವಿಟ್ಟು ಎಲ್ಲರೂ ಅದನ್ನು ತಿಳಿದುಕೊಳ್ಳಬೇಕು.

ಬೇಲೂರು ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ ಉಪ ಮಾರುಕಟ್ಟೆಗೆ ಸ್ಥಳ ಒದಗಿಸುವುದು.

48(419) - ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ (ಬೇಲೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕೃಷಿ ಮಾರುಕಟ್ಟೆಯಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು;

ಆ) ಬೇಲೂರು ತಾಲ್ಲೂಕಿನ ಹಳೇಬೀಡು ಗ್ರಾಮದಲ್ಲಿ ಉಪ ಮಾರುಕಟ್ಟೆಗೆ ಸ್ಥಳ ಒದಗಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ;

ಇ) ಮಾರುಕಟ್ಟೆಗೆ ಒದಗಿಸಿರುವ ಜೀಪಿನ ವಾರ್ಷಿಕ ಖರ್ಚು ಎಷ್ಟು;

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ

ಆ) ಆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಇ) ಬೇಲೂರು ಸಮಿತಿಯಲ್ಲಿರುವ ವಾಹನಕ್ಕೆ ಪ್ರತಿ ತಿಂಗಳು ಅಂದಾಜು ರೂ. 3703-00 ರಂತೆ ಇಂಧನ ವೆಚ್ಚ ಭರಿಸಲಾಗುತ್ತಿದ್ದು, ಈ ವರ್ಷದಲ್ಲಿ ಇಂಧನ ಮತ್ತು ದುರಸ್ತಿಗಾಗಿ ಸೇರಿ ರೂ. 58,419-00 ವೆಚ್ಚವಾಗಿರುತ್ತದೆ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ಕೃಷಿ ಮಾರುಕಟ್ಟೆಯಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 'ಇಲ್ಲ' ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದಾಯವಿಲ್ಲವೇ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ : ಮಾನ್ಯ ಅಧ್ಯಕ್ಷರೆ, ಇಲ್ಲ. ಆದರೆ ನಮ್ಮ ಎ.ಪಿ.ಎಂ.ಸಿ.ಯಿಂದ ಶೇಕಡ 30ರಷ್ಟು ಕನ್ಸಾಲಿಡೇಟೆಡ್ ಫಂಡ್ ಎಂದು ಕೇವಲ ಸ್ಕಾಲರಿ ಸಲುವಾಗಿ ಸೀಮಿತವಾಗಿ ಹಣ ಬರುವುದರಿಂದ ಸರ್ಕಾರಕ್ಕೆ ಆದಾಯವಿಲ್ಲವೆನ್ನುವ ಮಾತನ್ನು ನಾನು ಹೇಳಿದ್ದೇನೆ.